ಎನ್ನುವುದನ್ನು ಅರಿತು ತಮ್ಮತ್ತ ಸೆಳೆದುಕೊಂಡರು. ಅಲ್ಲಿಂದ ನಾಲ್ಕು ಐಪಿಎಲ್ ಋತುಗಳಲ್ಲಿ ಸೂರ್ಯಕುಮಾರ್ 164, 157, 182 ಹಾಗೂ 105 ರನ್‌ಗಳನ್ನು ಕಲೆಹಾಕಿದರು. ಇವು ದೊಡ್ಡ ಮೊತ್ತಗಳಲ್ಲವಾದರೂ ಆಟದಲ್ಲಿನ ಸುಧಾರಣೆಗೆ ನೆರವಾದವು. 2018ರಲ್ಲಿ ಮತ್ತೆ ಮುಂಬೈ ತನ್ನ ಹುಡುಗನನ್ನು ಬರಸೆಳೆಯಿತು. ಅಷ್ಟು ಹೊತ್ತಿಗೆ ಸೂರ್ಯನ ಪ್ರಕಾಶ ಬೇರೆಯದೇ ಆಗಿತ್ತು. ಕವಿದಿದ್ದ ಮೋಡಗಳನ್ನೆಲ್ಲ ಕರಗಿಸುವಂಥ ಆಟ ಕರಗತವಾಗಿತ್ತು. 512, 424 ಹಾಗೂ 480 ರನ್‌ಗಳನ್ನು 2018ರಿಂದ ಮೂರು ಐಪಿಎಲ್ ಋತುಗಳಲ್ಲಿ ಅವರು ದಾಖಲಿಸಿದರು.

ಭಾರತದ ಅಂತರರಾಷ್ಟ್ರೀಯ ಟ್ವೆಂಟಿ20 ಕ್ರಿಕೆಟ್ ತಂಡಕ್ಕೆ ಸೂರ್ಯಕುಮಾರ್ ಆಯ್ಕೆಯಾಗಲು ಕಾರಣ ಬರೀ ಐಪಿಎಲ್ ಅಲ್ಲ, ದೇಸಿ ಕ್ರಿಕೆಟ್‌ನಲ್ಲಿನ ಅವರ ರನ್ ಗಳಿಕೆಯೂ ಬೆನ್ನಿಗಿತ್ತು. ಚುಟುಕು ಕ್ರಿಕೆಟ್‌ಗೆ ಅವರ ಆಟ ಹೆಚ್ಚು ಹೇಳಿ ಮಾಡಿಸಿದಂತೆ ಇತ್ತೆನ್ನುವುದಂತೂ ನಿಜ. ಇಂಗ್ಲೆಂಡ್ ವಿರುದ್ಧ ಅವರನ್ನು ಟ್ವೆಂಟಿ20 ತಂಡಕ್ಕೆ ಮೊದಲು ಆಯ್ಕೆ ಮಾಡಿದಾಗ, ಎರಡನೆಯ ಪಂದ್ಯದಲ್ಲೇ 31 ಎಸೆತಗಳಲ್ಲಿ 57 ರನ್ ಜಮೆ ಮಾಡಿದರು. ಅದರ ಮುಂದಿನ ಪಂದ್ಯದಲ್ಲಿ 17 ಎಸೆತಗಳಲ್ಲಿ 32 ರನ್‌ಗಳು ಹರಿದುಬಂದವು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿ ಅವರು ಗಳಿಸಿದ ಮೊತ್ತಗಳಿವು. ವಿರಾಟ್ ಕೊಹ್ಲಿ ಇನಿಂಗ್ಸ್ ಆರಂಭಿಸಬೇಕೆಂಬ ನಿರ್ಧಾರವನ್ನು ಆಗ ತೆಗೆದುಕೊಂಡಿದ್ದರಿಂದ ಸೂರ್ಯಕುಮಾರ್ ಅವರಿಗೆ ಇಂತಹ ಅವಕಾಶ ಸಿಕ್ಕಿತ್ತು.

77 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ ಮೇಲೆ 44ಕ್ಕಿಂತ ಹೆಚ್ಚು ಸರಾಸರಿಯಲ್ಲಿ ಸೂರ್ಯಕುಮಾರ್ ರನ್‌ಗಳನ್ನು ಕಲೆಹಾಕಿದ್ದರು. ಅಷ್ಟಾದಮೇಲೆ ಅವರನ್ನು ಅಂತರರಾಷ್ಟ್ರೀಯ ತಂಡಕ್ಕೆ ಪರಿಗಣಿಸಿದ್ದು.

ಹತ್ತನೇ ವಯಸ್ಸಿನಿಂದಲೇ ಸೂರ್ಯಕುಮಾರ್ ಕ್ರಿಕೆಟ್ ಆಡುತ್ತಿದ್ದರು. ಮೊದಲು ಗಲ್ಲಿ ಕ್ರಿಕೆಟ್ ಆಡುತ್ತಿದ್ದ ಅವರನ್ನು ತಂದೆ ಅಶೋಕ್ ಕುಮಾರ್ ಯಾದವ್ ಗಮನಿಸಿದರು. 'ಬಿಎಆರ್‌ಸಿ'ಯಲ್ಲಿ ಎಲೆಕ್ಟ್ರಿಕಲ್ ಎಂಜಿನಿಯರ್ ಆಗಿದ್ದ ಅವರು ಉತ್ತರ ಪ್ರದೇಶದ ಘಾಜಿಪುರದಿಂದ ಮುಂಬೈಗೆ ವರ್ಗಾವಣೆಯಾಗಿ ಬಂದಿದ್ದ ಸಂದರ್ಭ ಅದು. ಅನುಶಕ್ತಿ ನಗರದಲ್ಲಿ 'ಬಿಎಆರ್‌ಸಿ' ಕ್ರಿಕೆಟ್ ಶಿಬಿರಕ್ಕೆ ಚಿಕ್ಕಪ್ರಾಯದಲ್ಲೇ ಅವರು ಮಗನನ್ನು ಸೇರಿಸಿದರು. ಅಲ್ಲಿಂದ ವೆಂಗ್‌ಸರ್ಕರ್ ಕ್ರಿಕೆಟ್ ಅಕಾಡೆಮಿಗೆ ಪ್ರತಿಭೆ ಸಾಣೆಗೊಡ್ಡಿಕೊಳ್ಳಲು ಹೋಗಿದ್ದೂ ಫಲ ಕೊಟ್ಟಿತು.



ಸೂರ್ಯಕುಮಾರ್ ಯಾದವ್

ಇಂಗ್ಲೆಂಡ್ ವಿರುದ್ಧದ ಟ್ವೆಂಟಿ20 ಪಂದ್ಯಗಳಲ್ಲಿ ಸೂರ್ಯಕುಮಾರ್ ಚೆನ್ನಾಗಿ ಆಡಿದ್ದನ್ನು ನೋಡಿ ನಾಯಕ ವಿರಾಟ್ ಕೊಹ್ಲಿ 'ಎಕ್ಸ್ ಫ್ಯಾಕ್ಟರ್‌ನ ಆಟಗಾರ ಇವನು' ಎಂದು ಬಣ್ಣಿಸಿದ್ದರು. ಆಮೇಲೆ ಏಕದಿನದ ಅಂತರರಾಷ್ಟ್ರೀಯ ಪಂದ್ಯಗಳನ್ನ ಆಡುವ ತಂಡಕ್ಕೂ ಸೂರ್ಯ ಆಯ್ಕೆಯಾದದರು ಇತ್ತೀಚಿನ ಇತಿಹಾಸ.

ಮೂವತ್ತನೇ ವಯಸ್ಸಿನಲ್ಲಿ ಭಾರತದ ಪರವಾಗಿ ಆಡುವ ಅವಕಾಶ ಸೂರ್ಯಕುಮಾರ್‌ಗೆ ಒಲಿಯಲು ಐಪಿಎಲ್ ವೇದಿಕೆಯಾದದ್ದು ನಿಜ. ಹಾಗೆಂದು ದಿಢೀರನೆ ಅವರಿಗೆ ಖ್ಯಾತಿ ಒಲಿದುಬರಲಿಲ್ಲ. ಪ್ರತಿ ವರ್ಷ ತಂಡದ ಆಯ್ಕೆ ನಡೆಯುವಾಗಲೂ ಅವರು ಅವುಡುಗಚ್ಚಿ ತಮ್ಮ ಹೆಸರು ಇರಬಹುದೇ ಎಂದು ಏಳೆಂಟು ವರ್ಷಗಳಿಂದಲೂ ಕಾಯುತ್ತಲೇ ಇದ್ದರು. ಸ್ಪರ್ಧೆ ಎಷ್ಟರಮಟ್ಟಿಗೆ ಇದೆಯೆಂದರೆ, ಬೆಂಚ್‌ನಲ್ಲಿ ಕಾಯುತ್ತಾ ಕುಳಿತಿರುವ ಇಂತಹ ಕನಸುಗಾರರು ಐದಾರು ಮಂದಿಯಷ್ಟೇ ಅಲ್ಲ.

ಈ ಸಲದ ಐಪಿಎಲ್ ಋತು ಶುರುವಾದಾಗಲೂ ಗಾಯದಿಂದಾಗಿ ಮೊದಲ ಎರಡು ಪಂದ್ಯಗಳನ್ನು ಸೂರ್ಯಕುಮಾರ್ ಆಡಲು ಆಗಲಿಲ್ಲ. ಆಮೇಲೆ ಅವರು ತಂಡವನ್ನು ಸೇರಿಕೊಂಡರು. ಅಲ್ಲಿಂದ ಹಳೆಯ ಫಾರ್ಮ್ ಮುಂದುವರಿಯಿತು. ಈ ಸಲ 160 ರನ್‌ಗಳನ್ನು ಅವರು ಮೂರು ಪಂದ್ಯಗಳಲ್ಲಿ ಸೇರಿಸಿದ್ದಾರೆ. 'ಕಿಂಗ್ಸ್ ಇಲೆವೆನ್ ಪಂಜಾಬ್' ಎದುರಿನ ಪಂದ್ಯವನ್ನು ಅವರು ಬಹುತೇಕ ಗೆಲುವಾಗಿ ಪರಿವರ್ತಿಸಿದ್ದರು. ಅಷ್ಟರಲ್ಲಿ ರಬಾಡಾ ಹಾಕಿದ ಲೋ ಫುಲ್‌ಟಾಸ್‌ನ ಬಲೆಗೆ ಬಿದ್ದು ಔಟಾದರು. 43 ರನ್‌ಗಳ ಆ ಇನಿಂಗ್ಸ್ ನಂತರ 'ಮುಂಬೈ ಇಂಡಿಯನ್ಸ್' ತಂಡದ ಮುಖ್ಯ ತರಬೇತುದಾರ ಮಾಹೇಲ ಜಯವರ್ಧನೆ ಆಡಿದ ಮಾತಿನ ಬಹುಪಾಲು ಸೂರ್ಯಕುಮಾರ್ ಹೊಗಳಿಕೆಗೇ ಮೀಸಲಾಯಿತು.

ಮಾಹೇಲ ಅವರ ಪ್ರಕಾರ ಸೂರ್ಯಕುಮಾರ್ ಒಳ್ಳೆಯ ಫಿನಿಷರ್. ಅವರಷ್ಟು ಚೆನ್ನಾಗಿ ಇನಿಂಗ್ಸ್ ಅನ್ನು ಮುಗಿಸಬಲ್ಲ ಆಟಗಾರರು ಕ್ರಿಕೆಟ್‌ನಲ್ಲಿ ವಿರಳ.

ನಾಲ್ಕನೇ ಸ್ಟಂಪ್‌ನ ಲೈನ್‌ನಲ್ಲಿ ಇರುವ ಎಸೆತವನ್ನೂ ಎಳೆದುಕೊಂಡು ಲೆಗ್‌ಸೈಡ್‌ನತ್ತ ಹೊಡೆಯಬಲ್ಲ ಅಸಾಂಪ್ರದಾಯಿಕ ಹೊಡೆತವೊಂದು ಸೂರ್ಯಕುಮಾರ್ ಬತ್ತಳಿಕೆಯಲ್ಲಿ ಇದೆ. ಅವರ ಇಂತಹ ಆಟದ ವೈಖರಿ ಹಿಂದೆ ಮುಳುವಾದ ಉದಾಹರಣೆಯೂ ಉಂಟು. ಆಫ್‌ಸೈಡ್‌ನತ್ತ ಆಡಲು ಬಾರದ ಬ್ಯಾಟ್ಸ್‌ಮನ್ ಎಂದು ಇವರನ್ನು ಟೀಕಿಸಿದ್ದವರು ಅನೇಕರು. ಒಂದೊಮ್ಮೆ ದೇಸಿ ಕ್ರಿಕೆಟ್‌ನ ತಂಡಕ್ಕೆ ಆಯ್ಕೆಯಾಗದೇ ಹೋದಾಗ ಸಿಟ್ಟಿನಿಂದ ಅವರು ಏನೇನೋ ಮಾತನಾಡಿ ಕೆಂಗಣ್ಣಿಗೂ ಗುರಿಯಾಗಿದ್ದರು. ಆಮೇಲೆ ಕ್ಷಮಾಪಣೆ ಕೇಳಬೇಕಾಯಿತು.

ಒಂದು ದಶಕಕ್ಕೂ ಮೀರಿದ ಅವಧಿಯಲ್ಲಿ ಕ್ರಿಕೆಟ್‌ನ ಪರಿಸ್ಥಿತಿ ಸೂರ್ಯಕುಮಾರ್ ಅವರಿಗೆ ಸಾಕಷ್ಟು ಪಾಠಗಳನ್ನು ಕಲಿಸಿದೆ. ಅವರು ಶಿಸ್ತುಬದ್ಧ ಡಯೆಟ್‌ಗೆ ಕಟ್ಟುಬಿದ್ದರು. ದೇಹದ ತೂಕವನ್ನು ಗಣನೀಯವಾಗಿ ಇಳಿಸಿಕೊಂಡರು. ಚುರುಕಾಗಿ ಓಡುವುದನ್ನು ಅಭ್ಯಾಸ ಮಾಡಿಕೊಂಡರು. ಆಫ್‌ಸೈಡ್‌ನತ್ತಲೂ ಆಡಬಲ್ಲೆ ಎಂದು ಸಾಬೀತುಪಡಿಸಿದರು.

ಇಷ್ಟಾಗಿಯೂ ಪಂಜಾಬ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಎರಡು ರನ್‌ಔಟ್‌ಗಳಲ್ಲಿ ಅವರು ಭಾಗಿಯಾದರು. ಆಗ ಅನುಭವಿ ಆಟಗಾರ ಕೀರನ್ ಪೊಲಾರ್ಡ್ ಅವರನ್ನು ಹುರಿದುಂಬಿಸಿದ ಪರಿ ಕಣ್ಣಮುಂದೆ ಇದೆ.

ಸೂರ್ಯಕುಮಾರ್ ಇನ್ನೂ ಯಾವ ರೀತಿಯಲ್ಲಿ ಪ್ರಕಾಶಿಸುವರೋ ಎಂದು ನೋಡಬೇಕಿದೆ.

ಪ್ರತಿಕ್ರಿಯಿಸಿ: feedback@sudha.co.in